ಮನೆಯಿಂದ ಮನೆಗೆ ಯಾವ ಯಾವ ಕೆಲಸಗಳಿಗೆ ವರ್ಗಾಯಿಸಲ್ಪಡುತ್ತಿದ್ದೆನೋ... ಕೊನೆಗೆ ನನಗೆ ಬೀದಿಗೆ ವರ್ಗಾವಣೆ ಆಯಿತು. ನನಗೆ ಖೇದವಿಲ್ಲ. ನನ್ನಲ್ಲಿ ಪ್ರಶ್ನೆಗಳೇ ಇಲ್ಲ. ಉತ್ತರಗಳೂ ಇಲ್ಲ. ಕೇವಲ ನಿರ್ಲಿಪ್ತತೆ. ಬೀದಿಗೆ ಬಿದ್ದವಳಿಗೆ ದೊರಕಿದ್ದೇ ಸಾಧುಗಳ ಗುಂಪು. ಕುಂಭಮೇಳಕ್ಕೆ ಹೋಗಿ ಹಿಂತಿರುಗುತ್ತಿದ್ದ ಗುಂಪು ಅದು. ನಾನೂ ಆ ಗುಂಪಿನ ಜೊತೆಯಲ್ಲಿ ನಡೆಯತೊಡಗಿದೆ. ಯಾಕೆ ನಡೆದೆನೋ ಗೊತ್ತಿಲ್ಲ. ಅವರು ಒಂದೆರಡು ಸಲ ತಿರುಗಿ ನನ್ನ ಕಡೆ ನೋಡಿದರು. ಏನೂ ಹೇಳಲಿಲ್ಲ. ಕೊನೆಗೆ ಅವರೊಂದಿಗೇ ಊಟ ಮತ್ತು ಮಲಗುವಾಗ ಅವರ ಬಳಿಯೇ ಮುದುಡಿ ಮಲಗುತ್ತಿದ್ದೆ. ಒಂದೆರಡು ದಿನ ಕಳೆಯುವಷ್ಟರಲ್ಲಿ ಏನೆನ್ನಿಸಿತೋ ಒಬ್ಬ ಸಾಧು ನಾನು ಮುದುಡಿ ಮಲಗಿದ್ದ ಕಡೆಗೆ ಬಂದ. ಏನೋ ಹೇಳಿದ. ಅರ್ಥವಾಗಲಿಲ್ಲ. ಪಿಳ ಪಿಳನೇ ಕಣ್ಣು ಬಿಟ್ಟೆ. ನನ್ನ ಕಣ್ಣುಗಳೊಳಗೇ ನೋಡಿದ. ಏನೋ ಮಿಂಚು ಹೊಡೆದಂತಾಯಿತು. ಆಗಷ್ಟೇ ಎಚ್ಚರ ಬಂದಂತೆ ಸುತ್ತಲೂ ಗಮನಿಸಿದೆ. ಸಾಧುಗಳು. ಮತ್ತೂ ಎರಡು ದಿನ ಕಳೆಯುವಷ್ಟರಲ್ಲಿ ಅಮ್ಮ,ಅಪ್ಪ, ಅಮ್ಮಪ್ಪಳ್ಳಿ ಎಲ್ಲವೂ ಜ್ಞಾಪಕವಾಯಿತು. ಹೌದು ಅದೆಲ್ಲಿದೆ? ನಾನೆಲ್ಲಿದ್ದೇನೆ? ಯಾರನ್ನು ಕೇಳುವುದು? ಇಲ್ಲಿಗೆ ನಾನು ಹೇಗೆ ಬಂದೆ? ಮಾತಾಡಲು ನನಗೆ ಬರುತ್ತದೆಯೇ? ಒಂದೂ ಗೊತ್ತಿಲ್ಲದೆ ಮತ್ತೆರಡು ದಿನ ಕಳೆಯಿತು. ಹಾಗೆ ಕುಳಿತು ಚಿಂತಿಸುತ್ತಿದ್ದಾಗಲೇ ಆ ಸಾಧು ಕೇಳಿದ್ದ 'ಭೂಕ್ ನಹೀ ಹೈ ಕ್ಯಾ?' ಅಂತ. ಆಗಲೇ ನಾನು ಅವನನ್ನು ಕೇಳಿದ್ದು 'ಪಸಿಯಾ?' ಅಂತ.

ರೈಲು ಗಕ್ಕೆಂದು ನಿಂತಿತು. 'ಅಮ್ಮಪ್ಪಳ್ಳಿ ವಂದ್ ಎರಂಗ್ ಡಾ' ಒಬ್ಬ ಮಹಿಳೆ ಮಗುವನ್ನು ಎಳೆದುಕೊಂಡು ಇಳಿಯುತ್ತಿರುವುದು ಕಂಡಿತು. ಕಿಟಕಿಯಿಂದ ನೋಡಿದೆ. ತಮಿಳು ಅಕ್ಷರಗಳು. ಗುರುತಿಸಲಾಗಲಿಲ್ಲ. ಆದರೆ ಅಮ್ಮಪ್ಪಳ್ಳಿ ಹೆಸರು ಕಿವಿಗೆ ಬಿದ್ದಿತ್ತಲ್ಲವೇ... ಎದ್ದು ನಿಂತು ಬಾಗಿಲ ಬಳಿಗೆ ಬಂದು ನಿಧಾನವಾಗಿ ಇಳಿದೆ. ನನ್ನದು ಅನ್ನುವ 'ಲಗೇಜು' ಏನೂ ಇರಲಿಲ್ಲ. ಕೆಳಗಿಳಿದು ನೋಡಿದೆ. ನನಗೆ ಸುಪರಿಚಿತವಾದ ನಿಲ್ದಾಣ ಅದು. ಸ್ಮೃತಿ ಹಿಂದೆ ಸರಿದು ನಿಂತಿತು. ಅದೆಷ್ಟು ಬಾರಿ ನಾವು ಗೆಳತಿಯರೆಲ್ಲ ಇದೇ ನಿಲ್ದಾಣದಲ್ಲಿ ನಿಂತು ರೈಲಿಗೆ 'ಟಾ ಟಾ' ಹೇಳುತ್ತಾ ಚಪ್ಪಾಳೆ ತಟ್ಟುತ್ತಾ ಕುಣಿಯುತ್ತಿದ್ದೆವೋ. ಇಲ್ಲಿದ್ದ ಸ್ಟೇಷನ್ ಮಾಸ್ಟರ್ ನನ್ನನ್ನು ಎತ್ತಿಕೊಂಡು ಉಗಿಬಂಡಿಯ ಒಳಗೆಲ್ಲ ತೋರಿಸಿದ್ದ. ಯಾರಿಗೂ ಸಿಗದ ಮನ್ನಣೆ ನನಗೆ. ನಿಂತ ರೈಲು ಹೊರಟಿತು ಕೂ... ಸದ್ದಿನೊಂದಿಗೆ. ಸ್ಟೇಷನ್ ಖಾಲಿ. ಎದ್ದು ನಿಧಾನವಾಗಿ ಹೊರಬರಲು ಹೊರಟೆ. ಅದೇ ಸ್ಟೇಶನ್ ಮಾಸ್ಟರ್. ಕೂದಲು ಬಿಳಿಯಾಗಿತ್ತು ಈಗ. ಎದುರಿಗೆ ಸಿಕ್ಕ. ನನಗೆ ಗುರುತು ಸಿಕ್ಕಿತು. 'ಸ್ಟೇಷನ್ ಮಾಮ' ಅವನನ್ನು ನಾವು ಕರೆಯುತ್ತಿದ್ದುದೇ ಹಾಗೆ. ಕರೆಯಲು ಹೊರಟೆ. ಗಂಟಲಲ್ಲಿ ಸ್ವರ ಹೂತು ಬಿಟ್ಟಿತು. ಅವನು ಎದುರಿಗೆ ಬಂದಿದ್ದ. ನಕ್ಕೆ. ನನ್ನನ್ನೇ ದುರುಗುಟ್ಟಿ ನೋಡಿ 'ಟಿಕೇಟ್ ಇಲ್ಲೆಯಾ?' ಅಂದ. ಸಾಧು ತೆಗೆಸಿಕೊಟ್ಟಿದ್ದ ಟಿಕೇಟ್ ಇತ್ತು. ತೆಗೆದು ತೋರಿಸಿದೆ. 'ನಾಗಾಪುರದಿಂದ ಬಂದವಳಾ?' ತಮಿಳಿನಲ್ಲಿ ಕೇಳಿ ಆಶ್ಚರ್ಯ ವ್ಯಕ್ತ ಪಡಿಸಿದ. ಹರುಕು ಮುರುಕು ಹಿಂದಿಯಲ್ಲಿ ಪ್ರಶ್ನಿಸತೊಡಗಿದ 'ಕೈಸೇ ಆಯಾ ಹೈ ತೂ? ಕ್ಯೋಂ ಆಯಾ? ತುಮ್ಹಾರಾ ಸಾಥ ಕೋಯೀ ನಹಿ ಹೈ ಕ್ಯಾ?...' ನಾನು ಮೌನವಾದೆ. ಹೌದು ನನ್ನನ್ನು ಇಲ್ಲಿ ಯಾರೂ ಗುರುತಿಸುವುದಿಲ್ಲ.

ನಿಧಾನವಾಗಿ ಹೊರಗೆ ಬಂದೆ. ನನ್ನ ಹಳ್ಳಿಯ ಅದೇ ಮಣ್ಣಿನ ರಸ್ತೆಯಲ್ಲಿ ನಡೆಯತೊಡಗಿದೆ. ಮರಕೋತಿ ಆಡಿದ ಮರದ ಕೆಳಗೆ ಕುಳಿತು ಯೋಚಿಸತೊಡಗಿದೆ. ಹೌದು ಈ ಹರಕು ಬಟ್ಟೆಯಲ್ಲಿ ನನ್ನನ್ನು ಯಾರು ತಾನೆ ಗುರುತಿಸುತ್ತಾರೆ. ನನ್ನ ಗೆಳತಿಯರು ಯಾರಾದರೂ ಗುರುತಿಸಬಹುದೇನೋ. ಅಮ್ಮ,ಅಪ್ಪ ಅಂತೂ ಖಂಡಿತ ಗುರುತಿಸುತ್ತಾರೆ. ಅಮ್ಮ ನನ್ನ ಈ ಸೀರೆ